## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

## ಕೆ.ಆರ್.ನಗರ

## ಸಿ.ಸಿ. 111/2021

ಪಿಡಬ್ಲೂ-3

ಸಿಡಬ್ಲೂ-5

| | | |
|---|---|---|
| ಸಾಕ್ಷಿದಾರರ ಹೆಸರು | - | ಕುಮಾರ |
| ತಂದೆಯ ಹೆಸರು | - | ಹೇಳವಯ್ಯ |
| ವಯಸ್ಸು | - | 38 |
| ಕೆಲಸ | - | ಕಂಪ್ಯೂಟರ್ ಸೆಂಟರ್ |
| ವಾಸ | - | ಬ್ಯಾಡರಹಳ್ಳಿ, ಕೆ ಆರ್ ನಗರ |

ದಿನಾಂಕ 13.07.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ

ಚಾಸಾ 1 ನನಗೆ ಗೊತ್ತು. ಅವರು ನಮ್ಮ ಊರಿನ ಬೀಟ ಪೋಲಿಸ್. ಆರೋಪಿತರನ್ನು ನಾನು ನೋಡಿಲ್ಲ. ಚಾಸಾ 2 ರವರು ನನಗೆ ಗೊತ್ತಿಲ್ಲ. ಆರೋಪಿತರು ನನ್ನ ಸಮಕ್ಷಮ ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ದೈಹಿಕ ಹಲ್ಲೆ ಮಾಡಿ, ಅವರ ಸಮವಸ್ತ್ರ ಹರಿದು ಹಾಕಿ ಕರ್ತವ್ಯಕ್ಕೆ ಅಡ್ಡಿಪಡಿಸಿರುವುದನ್ನು ನಾನು ನೋಡಿಲ್ಲ. ನಾನು ಯಾವುದೇ ಜಗಳ ಬಿಡಿಸಿರುವುದಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಸ್ಥಳ ಮಹಜರ್ ಮಾಡಿ ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿಲ್ಲ. ನಿಪಿ 2 ಮತ್ತು 3 ರಲ್ಲಿರುವ ಸಾಕ್ಷಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 2 ಬಿ ಎಂದು 3 ಬಿ ಎಂದು ಗುರುತಿಸಲಾಯಿತು. 3 ವರ್ಷದ ಹಿಂದೆ ಪೋಲಿಸ ಠಾಣೆಗೆ ಹೋದಾಗ ಪೋಲಿಸರ ಕೋರಿಕೆ ಮೆರೆಗೆ ನಿಪಿ 2 ಮತ್ತು 3 ಕ್ಕೆ ಸಹಿ ಮಾಡಿರುತ್ತೇನೆ. ನಿಪಿ 2 ಮತ್ತು 3 ರಲ್ಲಿರುವ ವಿಚಾರ ನನಗೆ ಗೊತ್ತಿಲ್ಲ ನಾನು ಓದಿ ತಿಳಿದುಕೊಂಡಿಲ್ಲ. ನನ್ನ ಸಮಕ್ಷಮ ನ್ಯಾಯಾಲಯದ ಮುಂದಿರುವ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ನಾನು ಗಲಾಟೆ ನೋಡಿದ್ದೇನೆ ಎಂದು ಪೋಲಿಸರಿಗೆ ಹೇಳಿಕೆ ನೀಡಿಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ

ದಿಃ 02.06.2019 ರಂದು ರಾತ್ರಿ 11.00 ರಿಂದ 11.10 ಗಂಟೆ ಸಮಯದಲ್ಲಿ ನಾನು ಬೈಕ ನಲ್ಲಿ ಕೆ ಆರ್ ನಗರದ ರಸ್ತೆಯ ಸಿಟಿ ಲೈಟ್ ಹೋಟೆಲ್ ಮುಂದೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಆಗ ಸದರಿ ಹೋಟೆಲ್ ಮುಂಭಾಗ ಪೋಲಿಸರ ಜೊತೆ ಆರೋಪಿತರು ಚಾಸಾ 1 ರವರ ಜೊತೆ ಗಲಾಟೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆಗ ನಾನು ಬೈಕ್ ನಿಲ್ಲಿಸಿ ಜಗಳ ಬಿಡಿಸಲು ಹೋದಾಗ ಆರೋಪಿತರಿಬ್ಬರೂ ಚಾಸಾ 1 ರವರನ್ನು ಕುರಿತು ನಮ್ಮ ದುಡ್ಡು ನಮ್ಮ ಕಾಸು ಎಷ್ಟು ಹೊತ್ತಾದರೂ ಕುಳಿತು ಊಟ ಮಾಡುತ್ತೇವೆ ನಾವು ಲೋಕಲ್ ಹುಡುಗರು ಕೇಳಲು ನೀವು ಯಾರು ಎಂದು ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವರ ಸಮವಸ್ತ್ರವನ್ನು ಹಿಡಿದು ಏಳೆದಾಡಿ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿದರು ಎಂದರೆ ಸರಿಯಲ್ಲ. ಆಗ ಆರೋಪಿತರಿಬ್ಬರೂ ಚಾಸಾ 1 ರವರ ಬಲಭುಜಕ್ಕೆ ಬಲಗೈ ರಿಸ್ಟ್‌ಗೆ ಹೊಡೆದು ಹಲ್ಲೆ ಮಾಡಿದರು ಎಂದರೆ ಸರಿಯಲ್ಲ.

2. 1 ನೇ ಆರೋಪಿ ಚಾಸಾ 1 ರವರ ಸಮವಸ್ತ್ರ ಹಿಡಿದು ಏಳೆದಾಡಿದ ಆಗ 2 ನೇ ಆರೋಪಿ ಚಾಸಾ 1 ರವರನ್ನು ಕೆಳಗೆ ಜಾಡಿಸಿ ನೂಕಿದ ಎಂದರೆ ಸರಿಯಲ್ಲ. ಆಗ ಚಾಸಾ 1 ರವರು ಕೆಳಗೆ ಬಿದ್ದಾಗ ಅವರ ಕಾಲಿಗೆ ಪೆಟ್ಟಾಗಿ ಶರ್ಟ್ ಹರಿದು ಹೋಯಿತು ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮು.ಮಾ 1 ಆ ದಿನ ಚಾಸಾ 1 ರವರು ಧರಿಸಿದ ಬಟ್ಟೆ ಎಂದರೆ ಸರಿಯಲ್ಲ. ಆಗ ನಾನು, ಚಾಸಾ 3 ಮತ್ತು 5 ರವರು ಜಗಳ ಬಿಡಿಸಿದೆವು ಎಂದರೆ ಸರಿಯಲ್ಲ.

3. ದಿಃ 03.06.2019 ರಂದು ಪೋಲಿಸರು ಮದ್ಯಾಹ್ನ 02.30 ಗಂಟೆ ಸಮಯದಲ್ಲಿ ಘಟನಾ ಸ್ಥಳಕ್ಕೆ ಬಂದಿದ್ದು ಮಹಜರ್ ಸಮಯದಲ್ಲಿ ಪಂಚನಾಮೆಗೆ ಸಾಕ್ಷಿಯಾಗಿ ಬರಲು ನನ್ನನ್ನು ಕರದಿದ್ದು, ಅದಕ್ಕೆ ನಾನು ಒಪ್ಪಿರುತ್ತೇನೆ ಎಂದರೆ ಸರಿಯಲ್ಲ. ಆಗ ಪೋಲಿಸರಿಗೆ ಚಾಸಾ 1 ರವರು ಮು.ಮಾ 1 ರಿಂದ 3 ನ್ನು ಹಾಜರುಪಡಿಸಿದ್ದು, ಅವುಗಳನ್ನು ಪೋಲಿಸರು ನನ್ನ ಸಮಕ್ಷಮ ವಶಪಡಿಸಿಕೊಂಡು ನಿಪಿ

2 ರಂತೆ ಸ್ಥಳ ಮಹಜರ್ ಮಾಡಿ, ನಿಪಿ 3 ರಂತೆ ನಕ್ಷೆ ತಯಾರಿಸಿ ಅವುಗಳನ್ನು ನನಗೆ ಓದಿ ಹೇಳಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

4. ದಿಃ 04.06.2019 ರಂದು ಈಗ ಓದಿ ಹೇಳಿದಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸ.ಸ.ಅ ರವರ ಕೋರಿಕೆ ಮೇರೆಗೆ ಹೇಳಿಕೆಯನ್ನು ನಿಪಿ 5 ಎಂದು ಗುರುತಿಸಲಾಯಿತು. ಎಲ್ಲ ವಿಚಾರ ಗೊತ್ತಿದ್ದರೂ ಆರೋಪಿತರ ಜೊತೆ ಶಾಮೀಲಾಗಿ ಅವರಿಗೆ ಸಹಾಯವಾಗಲೇಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು -ಇರುವುದಿಲ್ಲ

ಮರು ವಿಚಾರಣೆ - ಇರುವುದಿಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 111/2021**

**ಪಿಡಬ್ಲೂ-2**

**ಸಿಡಬ್ಲೂ-2**

| | | |
|---|---|---|
| ಸಾಕ್ಷಿದಾರರ ಹೆಸರು | - | ಗಂಗಾಧರ |
| ತಂದೆಯ ಹೆಸರು | - | ಬಿ.ಯೋಗಪ್ಪ |
| ವಯಸ್ಸು | - | 57 |
| ಕೆಲಸ | - | ನಿವೃತ್ತ ಹೋಮ್ ಗಾರ್ಡ್ |
| ವಾಸ | - | ಆಯರಹಳ್ಳಿ ಹುಣಸೂರು |

ದಿನಾಂಕ 13.07.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ

ಜೂನ್ 2019 ರಲ್ಲಿ ನಾನು ಕೆ ಆರ್ ನಗರದಲ್ಲಿ ಹೊಮ್ ಗಾರ್ಡ್ ಆಗಿ ಕಾರ್ಯ ನಿರ್ವಹಿಸಿದ್ದೇನೆ. ಚಾಸಾ 1 ನನಗೆ ಗೊತ್ತು. ದಿಃ 02.06.2019 ರಂದು ಚಾಸಾ 1 ಮತ್ತು ನಾನು ರಾತ್ರಿ 11.30 ಯಿಂದ ಬೆಳಿಗ್ಗೆ 4 ಗಂಟೆವರೆಗೆ ಗಸ್ತು ಕಾರ್ಯವನ್ನು ಮಾಡಿರುತ್ತೇವೆ. ಆರೋಪಿತರನ್ನು ನಾನು ಈ ಹಿಂದೆ ನೋಡಿಲ್ಲ. ಅಂದು ನಾನು ಅಂಗಡಿಗಳನ್ನು ಬಾಗಿಲು ಹಾಕಿಸಿಕೊಂಡು ಬರುತ್ತಿದ್ದೆ. ಕೂಗಾಡುವ ಶಬ್ದ ಕೇಳುತ್ತಿತ್ತು. ಅಲ್ಲಿ ಯಾರು ಕೂಗಾಡುತ್ತಿದ್ದರು ಮತ್ತು ಯಾರು ಯಾರ ನಡುವೆ ಕೂಗಾಟ ಆಗುತ್ತಿತ್ತು ನನಗೆ ಗೊತ್ತಿಲ್ಲ. ಆರೋಪಿತರು ನನ್ನ ಸಮಕ್ಷಮ ಚಾಸಾ 1 ರವರಿಗೆ ಕರ್ತವ್ಯಕ್ಕೆ ಅಡ್ಡಿಯುಂಟು ಮಾಡಿ ದೈಹಿಕ ವಾಗಿ ಹಲ್ಲೆ ಮಾಡಿ ಅವರ ಸಮವಸ್ತ್ರವನ್ನು ಹರಿದು ಹಾಕಿರುವ ಘಟನೆಯನ್ನು ನಾನು ನೋಡಿಲ್ಲ ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ಘಟನೆಯ ಸಂಬಂದ ನಾನು ಪೋಲಿಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ. ಯಾವುದೇ ವಸ್ತುವನ್ನು ನೋಡಿದರೆ ಗುರುತಿಸಲಾಗುವುದಿಲ್ಲ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ

ದಿಃ 02.06.2019 ರಂದು ರಾತ್ರಿ 09.00 ಗಂಟೆಗೆ ಗಸ್ತು ಕೆಲಸಕ್ಕೆ ನೇಮಕವಾಗಿದ್ದು ಅದರಂತೆ ಠಾಣೆಗೆ ಕರ್ತವ್ಯಕ್ಕೆ ಬಂದಿದ್ದೆ ಎಂದರೆ ಸರಿ. ನಾನು ಹಾಗೂ ಚಾಸಾ 1 ರವರು ರಾತ್ರಿ 10 ಗಂಟೆಗೆ ಕೆ ಆರ್ ನಗರ ಟೌನ್ ನಲ್ಲಿ 2 ನೇ ಗಸ್ತಿಗೆ ಹೊರಟಿದ್ದೇವು ಎಂದರೆ ಸರಿ. ರಾತ್ರಿ 11 ಗಂಟೆ ಸಮಯದಲ್ಲಿ ಮೈಸೂರು ಹಾಸನ ಮುಖ್ಯ ರಸ್ತೆಯಲ್ಲಿರುವ ಸಿಟಿ ಲೈಟ್ ಹೋಟೆಲ್ ಬಳಿ ಬಂದಾಗ ಸದರಿ ಹೋಟೆಲ್ ಮುಚ್ಚದೆ ಇನ್ನೂ ಹೋಟೆಲ್ ವ್ಯಾಪಾರ ಮಾಡುತ್ತಿದ್ದರು ಎಂದರೆ ಸಾಕ್ಷಿಯು ನಾನು ಹೋಟೆಲ್ ಬಳಿ ಬಂದಿದ್ದೆ ಆದರೆ ವ್ಯಾಪಾರ ಮಾಡುತ್ತಿದ್ದರು ಇಲ್ಲವೋ ನಾನು ನೋಡಿಲ್ಲ.

2. ರಾತ್ರಿ 11 ಗಂಟೆ ಸಮಯವಾಗಿದ್ದರೂ ಬಾಗಿಲು ತೆಗೆದಿದ್ದೀರಿ ಬಾಗಿಲು ಮುಚ್ಚಿ ಸಾರ್ವಜನಿಕರಿಗೆ ತೊಂದರೆ ಕೊಡಬೇಡಿ ಎಂದು ನಾನು ಹಾಗೂ ಚಾಸಾ 1 ಹೇಳಿದ್ದೇವು ಎಂದರೆ ಸರಿಯಲ್ಲ. ಹೋಟೆಲ್ ನ ಒಳಗಡೆ 6 ಜನ ಊಟ ಮಾಡುತ್ತಿದ್ದರು ಅವರೆಲ್ಲರೂ ಹೊರಗೆ ಬಂದರು ಎಂದರೆ ಸರಿಯಲ್ಲ. ಆ 6 ಜನರಲ್ಲಿ ನ್ಯಾಯಾಲಯದ ಮುಂದಿರುವ ಇಬ್ಬರು ಆರೋಪಿತರು ಇದ್ದರು ಎಂದರೆ ನಾನು ನೋಡಿಲ್ಲ.

3. ಆಗ ಆರೋಪಿತರಿಬ್ಬರೂ ಚಾಸಾ 1 ರವರನ್ನು ಕುರಿತು ನಮ್ಮ ದುಡ್ಡು ನಮ್ಮ ಕಾಸು ಎಷ್ಟು ಹೊತ್ತಾದರೂ ಕುಳಿತು ಊಟ ಮಾಡುತ್ತೇವೆ ನಾವು ಲೋಕಲ್ ಹುಡುಗರು ಕೇಳಲು ನೀವು ಯಾರು ಎಂದು ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವರ ಸಮವಸ್ತ್ರವನ್ನು ಹಿಡಿದು ಏಳೆದಾಡಿ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿದರು ಎಂದರೆ ಸರಿಯಲ್ಲ. ಆಗ ಆರೋಪಿತರಿಬ್ಬರೂ ಚಾಸಾ 1 ರವರ ಬಲಭುಜಕ್ಕೆ ಬಲಗೈ ರಿಸ್ಟ್ ಗೆ ಹೊಡೆದು ಹಲ್ಲೆ ಮಾಡಿದರು ಎಂದರೆ ನಾನು ನೋಡಿಲ್ಲ.

4. 1 ನೇ ಆರೋಪಿ ಚಾಸಾ 1 ರವರ ಸಮವಸ್ತ್ರ ಹಿಡಿದು ಏಳೆದಾಡಿದ ಆಗ 2 ನೇ ಆರೋಪಿ ಚಾಸಾ 1 ರವರನ್ನು ಕೆಳಗೆ ಜಾಡಿಸಿ ನೂಕಿದ ಎಂದರೆ ಸರಿಯಲ್ಲ. ಆಗ ಚಾಸಾ 1 ರವರು ಕೆಳಗೆ ಬಿದ್ದಾಗ ಅವರ ಕಾಲಿಗೆ ಪೆಟ್ಟಾಗಿ ಶರ್ಟ್ ಹರಿದು ಹೋಯಿತು ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮು.ಮಾ 1 ಆ ದಿನ ಚಾಸಾ 1 ರವರು ಧರಿಸಿದ ಬಟ್ಟೆ ಎಂದರೆ ನಾನು ನೋಡಿಲ್ಲ. ಆಗ ನಾನು, ಚಾಸಾ 3 ಮತ್ತು 4 ರವರು ಜಗಳ ಬಿಡಿಸಿದೆವು ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರು ಚಾಸಾ 1 ರವರ ಮೇಲೆ ಹಲ್ಲೆ ನಡೆಸಿ, ಅವಾಚ್ಯ ಶಬ್ದಗಳಿಂದ ಬೈದು, ಅವರ ಬಟ್ಟೆ ಹಿಡಿದು ಏಳೆದಾಡಿ ಮತ್ತು ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿರುವುದನ್ನು ಕಣ್ಣಾರೆ ನೋಡಿದ್ದರೂ ಸಹ ಆರೋಪಿತರಿಗೆ ಸಹಾಯವಾಗಲೆಂದ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ದಿಃ 0406.2019 ರಂದು ಈಗ ಓದಿ ಹೇಳಿದಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸ.ಸ.ಅ ರವರ ಕೋರಿಕೆ ಮೇರೆಗೆ ಹೇಳಿಕೆಯನ್ನು ನಿಪಿ 4 ಎಂದು ಗುರುತಿಸಿಲಾಯಿತು. ಎಲ್ಲ ವಿಚಾರ ಗೊತ್ತಿದ್ದರೂ ಆರೋಪಿತರ ಜೊತೆ ಶಾಮೀಲಾಗಿ ಅವರಿಗೆ ಸಹಾಯವಾಗಲೇಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> -ಇರುವುದಿಲ್ಲ

<u>ಮರು ವಿಚಾರಣೆ</u> - ಇರುವುದಿಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ